**OS No. 254/2009**
**PW-1**

ಸಾಕ್ಷಿಯನ್ನು ದಿಃ **24.11.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಬಿ ಎಮ್ ಎಸ್ ವಕೀಲರಿಂದಃ

ನಾನು ನಿವೇಶನವನ್ನು ಪಡೆದ ನಂತರ ನಿಪಿ-**23** ನಕ್ಷೆಯನ್ನು ಪಡೆದಿರುತ್ತೇನೆ. ನಿಪಿ-**23** ಕ್ಕೆ ಒತ್ತಾಸೆಯಾಗಿ ಮನೆಯಿದೆ ಎಂದು ತೋರಿಸಲು ದೃಡೀಕರಣ ಪತ್ರವನ್ನು ಪಡೆದಿರುವುದಿಲ್ಲ. ಸದರಿ ನಿಪಿ-**23** ರಲ್ಲಿ ಕಾಣುತ್ತಿರುವ ಚಾನೆಲ್ **1** ಬಂದ್ ಕಾಣುತ್ತಿದ್ದು, ಬರಿ ಹೆಸರಲ್ಲಿ ಮಾತ್ರ ಇದೆ, ಆದರೆ ತಿರುಗಾಡುವ ಜಾಗವಾಗಿ ಉಪಯೋಗ ಮಾಡುತ್ತಿದ್ದಾರೆ. ಸದರಿ ಚಾನೆಲ್ ಸರ್ಕಾರ ಮುಚ್ಚು ಹಾಕಿ ನಿವೇಶನಗಳನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮುಂದುವರೆದು ಸದರಿ ಜಾಗವನ್ನು ತಿರುಗಾಡಲು ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ನಿವೇಶನದಿಂದ ಉತ್ತರ ಕಡೆ ರಾಜ ಬೀದಿ ಇದೆ ಎಂದರೆ ಸರಿಯಲ್ಲ. ನನ್ನ **25*35** ಅಡಿ ನಿವೇಶನದ ಉತ್ತರ ಕಡೆ ಫಜರುಲ್ಲಖ್ ಅವರ ಮನೆ ಇದೆ. ಈ ಹಿಂದೆ ಫಜರುಲ್ಲಖ್ ರವರ ನಮ್ಮ ಮನೆಯ ಮುಂದೆ ಗಡೆ ತಿರುಗಾಡಲು ರಸ್ತೆ ಬೇಕು ಎಂದು ಒಂದು ದಾವೆ ಸಲ್ಲಿಸಿದ್ದೆ ಎಂದರೆ ಸರಿ. ನಮ್ಮ ಮನೆಯಿಂದ ಫಜರುಲ್ಲಖ್ ರವರ ಮನೆಯ ಉತ್ತರಕ್ಕೆ ಹೋಗಲು ರಸ್ತೆಯನ್ನು ಬಂದ್ ಮಾಡಿರುವುದಿಲ್ಲ. ಪ್ರತಿವಾದಿಯವರು ಮನೆಯ ಪಕ್ಕ ಕಾಂಪೌಂಡನ್ನು ನಿರ್ಮಾಣಗೊಳಿಸುವ ಸಲುವಾಗಿ ಅಲ್ಲಿ ರಸ್ತೆ ಇದೆ ಎಂದು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-**23** ಸ್ಕೆಚ್ ಗೂ ಈ ದಾವೆಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಿಪಿ-**23** ರಂತೆ ದಾವಾ ಆಸ್ತಿಯಲ್ಲಿ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಈ ಹಿಂದಿನ ದಾವೆಯಲ್ಲಿ ಪ್ರತಿವಾದಿಯನ್ನು ಕಕ್ಷಿದಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿರುತ್ತಾರೆ.)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ